**ಓ.ಎಸ್ 280/2017**

**ಪಿ.ಡಬ್ಲೂ-1**

ದಿನಾಂಕಃ **27.11.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ಪ್ರತಿವಾದಿ 2 ಮತ್ತು 3 ಪರ ಶ್ರೀ ಬಿ.ಎಸ್.ವೈ ವಕೀಲರಿಂದಃ**

ನಮ್ಮ ತಂದೆ ದೊಡ್ಡೆಗೌಡರವರಿಗೆ ನಾವು ಮೂರು ಜನ ಮಕ್ಕಳು ಅವರೆಂದರೆ ನಾನು ಮತ್ತು 2 ಮತ್ತು 3 ಪ್ರತಿವಾದಿಗಳು. ಚನ್ನೇಗೌಡ ಎಂಬ ನನಗೆ ಅಣ್ಣನಿರುತ್ತಾನೆ ಎಂದರೆ ಸರಿಯಲ್ಲ. ಸದರಿಯವರು ನನಗೆ ಅಣ್ಣನಾಗಿದ್ದು ಅವರು ಕುಟ್ಟವಾಡಿ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸುಳ್ಳು. ಸದರಿಯವರಿಗೆ ಆಸ್ತಿಯಲ್ಲಿ ಭಾಗ ನೀಡಬೇಕಾಗುತ್ತದೆಂದು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಸ.ನಂ. 19/ಪಿ ಮತ್ತು ಮನೆಗೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡಿರುತ್ತೇನೆ. ಐಟಂ ನಂಬರ 2 ಜಂಜರ್ ನಂಬರ ಸ್ವತ್ತಿನ ಸಂಖ್ಯೆ ಆಸ್ತಿಗಳ ವಿವರ ಈ ದಾವೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಐಟಂ ನಂಬರ 1 ಆಸ್ತಿಯನ್ನು ಒಂದನೇ ಪ್ರತಿವಾದಿಗೆ ಸರ್ಕಾರದಿಂದ ಸಾಗುವಳಿಗೆ ಮಂಜೂರಾಗಿದ್ದು ಎಂದರೆ ಸುಳ್ಳು. ಸದರಿ ಬಗ್ಗೆ ನಿಪಿ-2 ರಲ್ಲಿ ನಮೂದು ಇರುತ್ತದೆಂದರೆ ಸುಳ್ಳು. ಐಟಂ ನಂಬರ 1 ದಾವಾ ಆಸ್ತಿ 1 ನೇ ಪ್ರತಿವಾದಿಗೆ ಮಂಜೂರಾಗಿದ್ದು ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸುಳ್ಳು ಮುಂದುವರೆದ ಒಟ್ಟು ಕುಟುಂಭದಲ್ಲಿ ಸಂಪಾದಿಸಿದಂತಹ ಹಣದಿಂದ ನಮ್ಮ ತಾಯಿಯಾದ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಐಟಂ ದಾವಾ ಆಸ್ತಿ 1 ನೇ ಪ್ರತಿವಾದಿಗೆ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ಅದರಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಎರಡನೇ ದಾವಾ ಆಸ್ತಿಯಲ್ಲಿ ನಾನು ವಾಸಿಸುತ್ತಿದ್ದೇನೆಂದರೆ ಸರಿ. 1 ನೇ ಐಟಂ ದಾವಾ ಆಸ್ತಿ 1 ನೇ ಪ್ರತಿವಾದಿಗೆ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ 2 ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ವಿಲೇವಾರಿ ಮಾಡಿರುತ್ತಾರೆಂದರೆ ಸುಳ್ಳು.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದು ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.